ಶ್ರೀ ಕೆ. ಎಚ್. ಹನುಮೇಗೌಡ.—ಈ ಯೋಜನೆಯು ಅಂದಾಜು ಕೇಂದ್ರ ಸರ್ಕಾರದಲ್ಲಿ ಕುಳಿತಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದ್ದಾರೆ ಎಕರೆವಾರು ವಿರ್ಚಿನ ದೃಷ್ಟಿಯಲ್ಲಿ ಈ ಯೋಜನೆಗೆ ಬಹಳ ಕಡಿಮೆ ಹಣ ಬೀಳುತ್ತದೆ. ಆಲ್ಲದೆ, ಬಹಳ ಕಷ್ಟದಲ್ಲಿರುವ ಜನರಿಗೆ ಈ ಯೋಜನೆ ಸಹಾಯಕ ವಾಗುತ್ತದೆ. ಆದುದರಿಂದ, ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು, ಆದಷ್ಟು ಬೇಗ ಯೋಜನೆಯನ್ನು ಪ್ರಾರಂಭಿಸಲಾಗುವುದೆ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಹನುಮೇಗೌಡರು ಅರ್ಥ ಮಾಡಿಕೊಳ್ಳಬೇಕು. ಕಾವೇರಿ ಯೋಜನೆಗಳಲ್ಲೊಂದನ್ನೂ ಕೇಂದ್ರದವರು ಕ್ಲಿಯರ್ ಮಾಡಿಲ್ಲ. Even this Hemavathi or Harangi except Kabini, have not been cleared by them. But even then we are going ahead. ನಾಳೆವರೆಗೂ ಕಾಯುತ್ತಾ ಕುಳಿತುಕೊಳ್ಳುವುದಕ್ಕಾಗುವುಲ್ಲವೆಂದು ಪ್ರಾರಂಭ ಮಾಡಿದ್ದೇವೆ. ಯಗಚಿ ಯೋಜನೆಯು ಎಕರೆವಾರು ವಿರ್ಚಿನ ದೃಷ್ಟಿಯಲ್ಲಿ ಬಹಳ ಕಡಮೆ ಬೀಳುತ್ತದೆಂದು ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ಪ್ರತಿ ಎಕರೆಗೆ ಐದು ಸಾವಿರ ರೂಪಾಯಿ ಯಷ್ಟು ವಿರ್ಚು ಬೀಳುತ್ತದೆ. ಈಗ ಇರತಕ್ಕ ಕಷ್ಟವೆಂದರೆ ಕೇಂದ್ರ ಸರ್ಕಾರದವರು ಇನ್ನೂ ಒಪ್ಪಿಗೆ ಕೊಡದೆ ಇರುವುದು. ಈ ವರ್ಷದ ಆಯವ್ಯಯದಲ್ಲಿ ತಾವು ನೋಡಿರುವಂತೆ ನೀರಾವರಿ ಮತ್ತು ವಿದ್ಯುಚ್ಛಕ್ತಿ ಉತ್ಪಾದನಾ ಯೋಜನೆಗೆ ಯಾವ ಪ್ರಮಾಣದಲ್ಲಿ ವಿರ್ಚು ಮಾಡುತ್ತಿದ್ದೇವೆ ಎನ್ನುವುದು ಗೋತ್ತಿದೆ. ಇನ್ನೂ ಬೇಕಾದಷ್ಟು ಯೋಜನೆಗಳಿವೆ; ಅವಕ್ಕೆಲ್ಲ ದುಡ್ಡನ್ನು ಎಲ್ಲಿಂದ ತರಲಿ?

ಶ್ರೀ ಕೆ. ಎಚ್. ಹನುಮೇಗೌಡ.—ತಾವು ಎಷ್ಟೋ ಭಾರ ಹೊತ್ತಿದ್ದೀರಿ; ದೊಡ್ಡ ಮನಸ್ಸು ಮಾಡಿ ಈ ಯೋಜನೆಯನ್ನು ಪ್ರಾರಂಭ ಮಾಡಿದರೆ, ಎಲ್ಲ ಯೋಜನೆಗಳ ಜೊತೆಗೆ ಇದೂ ನಡೆದುಕೊಂಡು ಹೋಗುತ್ತದೆ.

SRI D. DEVARAJ URS.—I cannot give any commitment Sir.

Electrification of Villages in Badami Taluk

189. SRI B. B. CHIMMANAKATTI (Badami).—Will the Chief Minister be pleased to state :—

(*a*) the number of villages in Badami Taluk which are electrified (furnish the names of villages) ;

(*b*) the number of villages in Badami Taluk which are yet to be electrified (furnish the names of villages) ;

(*c*) when all the villages will be electrified ?

SRI H. C. SREEKANTAIAH (Minister for Municipal Administration) [On behalf of SRI D. DEVARAJ URS (Chief Minister).—

(*a*) 134 villages *vide* Statement laid on the Table. * *

(*b*) 22 villages *vide* Statement laid on the Table. *

(*c*) It depends on various factors like availability of materials and compliance of the required formalities of the Karnataka Electricity Board.

---

* * Copy placed in the Karnataka Legislature Library *vide* No. 10 dated 23rd March 1979.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಬಾದಾಮಿ ತಾಲ್ಲೂಕಿನಲ್ಲಿ ವಿದ್ಯುತ್ತೀಕರಣಗೊಳಿಸಿದಂಥ ಹಳ್ಳಿಗಳ ಸಂಖ್ಯೆ ಸಿಸಿಳ ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಇನ್ನು ೧೦–೧೫ ಹಳ್ಳಿಗಳಿಗೆ ಕಂಬಗಳನ್ನು ಹಾಕಿ ತಂತಿ ಎಳೆಯುದೇ ಹಾಗೆಯೇ ಇವೆ ; ಈ ಹಳ್ಳಿಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ, ಇವರ ತಾಲ್ಲೂಕಿನಲ್ಲಿ ೧೫೬ ಹಳ್ಳಿಗಳಿದ್ದು ; ಅದರಲ್ಲಿ ೯ ಹಳ್ಳಿಗಳು ಅನ್‌ಇನ್‌ಹ್ಯಾಬಿಟೇಟೆಡ್ ವಿಲೇಜಸ್ ಎಂದು ಮಾಡಲಾಗಿದೆ. ೧೪೭ ಹಳ್ಳಿಗಳ ಪೈಕಿ ೧೩೪ ಹಳ್ಳಿಗಳಿಗೆ ವಿದ್ಯುತ್ತೀಕರಣ ಮುಗಿದಿದೆ. ಉಳಿದ ೧೩ ಹಳ್ಳಿಗಳು ಆರ್.ಇ.ಸಿ. ಸ್ಕೀಂ ಕೆಳಗೆ ಸೆಂಟ್ರಲ್ ಅಪ್ರೂವಲ್‌ಗೆ ಕಳುಹಿಸಲಾಗಿದೆ. ಅಪ್ರೂವಲ್ ಆದ ತಕ್ಷಣ ಕೆಲಸ ಪ್ರಾರಂಭ ಮಾಡಲಾಗುವುದು ನಾಲ್ಕು ಹಳ್ಳಿಗಳಲ್ಲಿ ೨ ಹಳ್ಳಿಗಳನ್ನು ನಮ್ಮ ಎಲೆಕ್ಟ್ರಿಸಿಟಿ ಬೋರ್ಡ್ ಪ್ರೋಗ್ರಾಂನಲ್ಲಿ ಸೇರಿಸಲಾಗಿದೆ. ಒಟ್ಟಿನಲ್ಲಿ ಅವರ ತಾಲ್ಲೂಕು ಪುಣ್ಯ ಮಾಡಿದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—೧೩ಳಿ ಹಳ್ಳಿಗಳಲ್ಲಿ ಉಳಿದಂಥ ೧೦–೧೫ ಹಳ್ಳಿಗಳನ್ನು ನಾನು ತಿಳಿಸಿರುವುದು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ನಾನು ಆಗಲೇ ಹೇಳಿದ ಹಾಗೆ ೯ ಹಳ್ಳಿಗಳು ಅನ್‌ಇನ್‌ಹ್ಯಾಬಿಟೇಟೆಡ್ ಹಳ್ಳಿಗಳೆಂದು ಮಾಡಲಾಗಿದೆ. ಉಳಿದ ೬–೭ ಹಳ್ಳಿಗಳಿಗೆ ಕೆಲಸ ತೆಗೆದುಕೊಳ್ಳಲಾಗುವುದು.

Held over Question No. 223 on 22nd March 1979

re : Iglur Project Shimsha River.

ಶ್ರೀ ಜಿ. ಮಾದೇಗೌಡ.—ಇಗ್ಲೂರ್ ಯೋಜನೆಗೆ ಯಾವಾಗ ಸರ್ಕಾರದ ಆಜ್ಞೆ ಹೊರಟಿತು ? ಈಗಾಗಲೇ ಇದುವರೆವಿಗೂ ಖರ್ಚು ಮಾಡಿರತಕ್ಕ ಹಣ ಎಷ್ಟು ? ಯಾವಾಗ ಈ ಯೋಜನೆಯನ್ನು ಮುಗಿಸುತ್ತೀರಿ ?

† ಶ್ರೀ ಡಿ. ದೇವರಾಜ ಅರಸ್.—ಹೋದ ವರ್ಷ ಈ ಯೋಜನೆಯನ್ನು ಪ್ರಾರಂಭ ಮಾಡಿ ಸುಮಾರು ಒಂಬತ್ತುವರೆ ಲಕ್ಷ ರೂಪಾಯಿಗಳನ್ನು ಬಜ್ಜೆಟ್ಟಿನಲ್ಲಿ ಒದಗಿಸಿದ್ದೇವೆ. ಟೆಂಡರ್ ವಗೈರೆ ಕರೆದು ತೀರ್ಮಾನವಾಗಿದೆ ; ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಜಿ. ಮಾದೇಗೌಡ.—ಇಗ್ಲೂರು ಜಲಾಶಯಕ್ಕೆ ಶಿಂಷಾ ನದಿಯಿಂದ ಬರತಕ್ಕ ನೀರಿನ ಪ್ರಮಾಣ ಪೆಷ್ಟು ? ಎಷ್ಟು ಸಾವಿರ ಎಕರೆಗೆ ನೀರು ಒದಗಿಸುವುದಕ್ಕಾಗುತ್ತದೆ ? ಖರ್ಚಾಗಿ ಉಳಿಯುತಕ್ಕ ನೀರಿನ ಪ್ರಮಾಣ ಎಷ್ಟು ?

ಶ್ರೀ ಡಿ. ದೇವರಾಜ ಅರಸ್.—ನನ್ನ ಹತ್ತಿರ ಅಂಕಿ ಸಂಖ್ಯೆಗಳು ಇಲ್ಲ ; ಸುಮಾರು ೧೦,೦೦೦ ಎಕರೆಗೆ ನೀರು ಒದಗಿಸಬೇಕೆಂದು ಇದೆ.

ಶ್ರೀ ಜಿ. ಮಾದೇಗೌಡ.—ಇಗ್ಲೂರ್ ಹತ್ತಿರ ಬೇಕಾದಷ್ಟು ನೀರು ಇದೆ ; ಬಹಳಷ್ಟು ನೀರು ಪೋಲಾಗಿ ಕಾವೇರಿ ನದಿ ಸೇರಿ ಮದ್ರಾಸಿಗೆ ಹೋಗುತ್ತದೆ. ಬಲದಂಡೆ ಕಾಲುವೆಯನ್ನು ತೆಗೆದುಕೊಂಡರೆ ಪೋಲಾಗತಕ್ಕ ನೀರನ್ನು ಉಳಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ; ಇದಕ್ಕೆ ಸರ್ಕಾರದವರು ಮನಸ್ಸು ಮಾಡುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ರೀ ಜನರೇಟೆಡ್ ವಾಟರ್ ನ್ಯಾಚುರಲ್ ಆಗಿ ಫ್ಲೋ ಆಗುತ್ತದೆ. ಬಲದಂಡೆ ಕಾಲುವೆ ತೆಗೆದುಕೊಳ್ಳಬೇಕಾದರೆ ನೀರಿನ ಪ್ರಮಾಣ ನೋಡಿಕೊಂಡು ಮಾಡಬೇಕಾಗುತ್ತದೆ. ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ಮೂರು ಸಾವಿರ ಎಕರೆ ಭತ್ತದ ಬೆಳೆಗೆ ನೀರು ಒದಗಿಸಬೇಕು ; ಸೆಮಿ ಡ್ರೈ ಕ್ರಾಪ್ಸ್‌ಗೆ ನೀರು ಒದಗಿಸಿದರೆ ನೀರನ್ನು ಉಳಿಸುವುದಕ್ಕೆ ಸಾಧ್ಯವಿದೆ. ೬ ಲಿಫ್ಟ್ ಇರಿಗೇಷನ್ ಮಾಡಬೇಕೂಂತ ಮಾಡಿದ್ದೇವೆ. ತಾವು ಹೇಳತಕ್ಕ ಅಂಶವನ್ನು ಕೂಡ ವಿಚಾರ ಮಾಡುತ್ತೇವೆ. ನೀರು ಜಾಸ್ತಿ ಸಿಕ್ಕುವುದಾದರೆ ನನ್ನ ಆಭ್ಯಂತರ ಏನೂ ಇಲ್ಲ. First of all, let me start the